ಪ್ರತಿಪಾದನೆ ಮಾಡುವುದಕ್ಕೆ ಕರ್ನಾಟಕ ವಿದ್ಯುತ್ ಮಂಡಲಿ ಪರವಾಗಿ ಅಡ್ವೊಕೇಟ್ಸ್ ಕೋರ್ಟ್‌ಗೆ ಯಾರು ಅಪಿಯರ್ ಆಗುತ್ತಾರೋ ಅವರಿಗೆ ಇವತ್ತೇ ನಾನು ನಿರ್ದೇಶನ ಕೊಡುತ್ತೇನೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, ಮಾನ್ಯ.....

ಅಧ್ಯಕ್ಷರು:– ಈಗ ಮುಂದಿನ ಪ್ರಶ್ನೆ. ಇದೇ ವಿಚಾರದ ಬಗ್ಗೆ ರಾಯರೆಡ್ಡಿಯವರು, ಇನ್ನೂ ಅನೇಕರು ಕೇಳಿದ್ದಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಉಳಿದವರಿಂದಲೂ ಕಲೆಕ್ಟ್ ಮಾಡುತ್ತಾರೆಯೇ ? ಅಥವಾ ಅವರೂ ಕೋರ್ಟ್‌ಗೆ ಹೋಗುವವರೆಗೆ ಕಾಯುತ್ತಾರೋ ?

ಶ್ರೀ ಎಸ್. ಎಂ. ಕೃಷ್ಣ:– ಇಲ್ಲಿ ಸ್ಪೆಷಲ್ ಕೋರ್ಟ್ ದೊಡ್ಡ ದೊಡ್ಡ ಕುಳಗಳು. ಆದರೆ 1 ಲಕ್ಷ ಹಾಗೂ ಅದರ ಮೇಲೆ ಇರುವವರು ಮುನ್ಸೀಫ್ ಕೋರ್ಟ್‌ಗೆ ಹೋಗಿರುತ್ತಾರೆ. ಸಿವಿಲ್ ಜಡ್ಜ್ ಕೋರ್ಟ್‌ಗೆ ಹೋಗಿರುತ್ತಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಹೋಗಿರುತ್ತಾರೆ. ಆದುದರಿಂದ ನಮ್ಮ ವಿದ್ಯುತ್ ಮಂಡಲಿಗೆ ನಾವು ಏನು ಮಾಡ್ರನೈಸೇಷನ್ ಪ್ರೋಗ್ರಾಮ್ ಕೈಗೆ ತೆಗೆದುಕೊಂಡಿದ್ದೇವೆ ಅದನ್ನು ನಿರ್ವಹಿಸುವುದಕ್ಕೆ ಅತಿ ಅಗತ್ಯವಾಗಿ ಹಣ ಬೇಕಾಗಿದೆ. ಆದುದರಿಂದ ಮಾನ್ಯ ಸದಸ್ಯರ ಕಾಳಜಿ ಏನಿದೆ, ಬರಬೇಕಾಗಿರತಕ್ಕ 500 ಕೋಟಿ ಚಿಲ್ಲರೆ ಬಾಕಿ ವಸೂಲಿ ಮಾಡಬೇಕೆನ್ನತಕ್ಕದ್ದು ಅದು ನಮಗೆ ಇನ್ನೂ ಹೆಚ್ಚು ಕಾಳಜಿ ಇದೆ. ನಾವು ದೊಡ್ಡ ಗಾತ್ರದಲ್ಲಿ ಮಾಡ್ರನೈಸೇಷನ್ ಪ್ರೋಗ್ರಾಮ್ ಈ ವರ್ಷ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಸಲಹೆ ಸೂಚನೆಗಳು ಏನೇನು ಇವೆ ಅವುಗಳನ್ನು ಅನುಷ್ಠಾನಕ್ಕೆ ತಂದು ಆದಷ್ಟು ಬೇಗ ಇವುಗಳನ್ನು ಫೈಸಲ್ ಮಾಡುವುದಕ್ಕೆ ಸೂಚನೆ ಕೊಡುತ್ತೇವೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಆಯವ್ಯಯದಲ್ಲಿ ನಿಗದಿಯಾದ ಹಣ

369 (1130): ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಾಪುರ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರದವರು ಆಯವ್ಯಯದಲ್ಲಿ ನಿಗದಿಪಡಿಸಲಾಗಿರುವ ಹಣ ಎಷ್ಟು ?

ಆ) ಆ ಪೈಕಿ ಸರ್ಕಾರದವರು ಇದುವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಬಿಡುಗಡೆಯಾದ ಹಣದ ಪೈಕಿ ವೆಚ್ಚವಾಗಿರುವ ಹಣ ಎಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) 155 ಕೋಟಿ ರೂ.ಗಳು

ಆ) ಕಾಮಗಾರಿಗಳಿಗಾಗಿ ಜನವರಿ 1993ರ ಕೊನೆಯವರೆಗೆ 51.98 ಕೋಟಿ ರೂ.ಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ.

ಇ) ಭರವಸೆ ಪತ್ರದ ಮೂಲಕ ಬಿಡುಗಡೆ ಮಾಡಲಾದ ಹಣದಲ್ಲಿ ಜನವರಿ 1993ರ ಕೊನೆಯವರೆಗೆ ಕಾಮಗಾರಿಗಳಿಗಾಗಿ 50.65 ಕೋಟಿ ರೂ.ಗಳು ವೆಚ್ಚವಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಮಾನ್ಯ ಅಧ್ಯಕ್ಷರೇ, 1992–93ನೇ ಸಾಲಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ 155 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ನಿಗದಿ

ಮಾಡಲಾಗಿರುವುದನ್ನು ಹೇಳಿದ್ದಾರೆ. ಇದರಲ್ಲಿ ಇದುವರೆಗೆ ಬಿಡುಗಡೆ ಆಗಿದ್ದು ಕೇವಲ 51.98 ಕೋಟಿ ರೂಪಾಯಿ ಎಂದು ಸರ್ಕಾರ ಹೇಳುತ್ತದೆ. ಇದರಲ್ಲಿ ಖರ್ಚು ಮಾಡಿದ್ದುದು 51 ಕೋಟಿ ರೂಪಾಯಿಯೆಂದು ಸರ್ಕಾರದಿಂದ ಉತ್ತರ ಬಂದಿದೆ. ಸರ್ಕಾರ ನಿಗದಿ ಮಾಡಿದ 155 ಕೋಟಿಯಲ್ಲಿ ಕೇವಲ 51 ಕೋಟಿ ಬಿಡುಗಡೆ ಮಾಡಿ ಖರ್ಚು ಮಾಡಿದ್ದರೆ 2000ನೇ ಇಸವಿಯ ಒಳಗೆ ಕೃಷ್ಣಾ ಮೇಲ್ದಂಡೆ ಕಾರ್ಯ ಮುಗಿಸುವುದಕ್ಕೆ ಸಾಧ್ಯವೇ ? ಸರ್ಕಾರ ನಿಗದಿಪಡಿಸಿರುವ ಹಣದಲ್ಲಿ ಕೇವಲ 51 ಕೋಟಿ ರೂಪಾಯಿ ಖರ್ಚು ಏಕೆ ಆಗಿದೆ ? ಇದರ ಬಗ್ಗೆ ವಿಚಾರ ಮಾಡಬೇಕು ?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ನಾವು 1992ನೇ ಇಸವಿಯಲ್ಲಿ ಕೇಳಿದ ಹಣದ ಮೊತ್ತ, ಬಿಡುಗಡೆ ಆದ ಹಣದ ಮೊತ್ತ, ಖರ್ಚು ಆಗಿರತಕ್ಕ ಹಣದ ಮೊತ್ತ – ಇದರ ಬ್ರೇಕಪ್ ಕೊಡಬಹುದಾದರೆ ನಾವು ಕೇಳಿದ್ದು 77 ಕೋಟಿ 57 ಲಕ್ಷ ರೂಪಾಯಿಗಳು.

10.40 ಎ.ಎಂ.

ಸರ್ಕಾರದಿಂದ ಬಿಡುಗಡೆಯಾದಂಥ ಮೊತ್ತ 51 ಕೋಟಿ 98 ಲಕ್ಷ ರೂಪಾಯಿಗಳು. ಮತ್ತು ನಾವು ಖರ್ಚು ಮಾಡಿರತಕ್ಕಂಥಾದ್ದು 50 ಕೋಟಿ 65 ಲಕ್ಷ ರೂಪಾಯಿಗಳು. ಅದಾದ ಮೇಲೆ ಬಹುಶಃ ನಮ್ಮ ಬಿಲ್ಸ್ ಪೆಂಡಿಂಗ್ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ as on 1.3.93ರಲ್ಲಿ 2,741 ಲಕ್ಷ ರೂಪಾಯಿಗಳು. ಆದ್ದರಿಂದ ಇವೆಲ್ಲಕ್ಕೂ ಕೂಡ ಎಲ್ ಒಸಿಗಳನ್ನು ರಿಲೀಸ್ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಅಧ್ಯಕ್ಷರೇ, ನಾನು ಕೇಳುತ್ತಿರುವುದು, ಸರ್ಕಾರ ನಿಗದಿಪಡಿಸಿರುವುದು 150 ಕೋಟಿ ರೂಪಾಯಿಗಳು. 70–90 ಕೋಟಿ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾನು ಕೇಳುತ್ತೇನೆ, ಈ ಸರಕಾರಕ್ಕೆ ಈ ಹಣವನ್ನು ಖರ್ಚು ಮಾಡುವುದಕ್ಕೆ ಏಕೆ ಆಗಲಿಲ್ಲ ? ಇದಕ್ಕೆ ಕಾರಣಗಳೇನು ? ಈಗ ನಡೆಯುತ್ತಾ ಇರತಕ್ಕಂಥ ವರ್ಕ್ಸ್ ಏನಿವೆ, ಇದರಲ್ಲಿ ಆಲಮಟ್ಟಿಯದ್ದು ಸೇರಿದೆಯೇ ಎಂದು ತಿಳಿಸಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಇದೆಲ್ಲ ಸೇರಿರತಕ್ಕಂಥಾದ್ದು. ಆಲಮಟ್ಟಿ, ನಾರಾಯಣಪುರ, ಇಂಡಿ ಚಾನಲ್ ಮುದ್ನಾಳ ಚಾನಲ್ ಎಲ್ಲ ಸೇರಿರತಕ್ಕಂಥಾದ್ದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಕೇವಲ 51 ಕೋಟಿ ಬಿಡುಗಡೆ ಮಾಡಬೇಕಾದರೆ ಅದಕ್ಕೆ ಕಾರಣವೇನು ? ಇದನ್ನು ಸವಿಸ್ತಾರವಾಗಿ ಹೇಳಬೇಕು. ಸರ್ಕಾರ ನಿಗದಿಪಡಿಸಿದ ಹಣವನ್ನೂ ಕೂಡ ಏಕೆ ಖರ್ಚು ಮಾಡಿಲ್ಲ ? ಇದು ಬಹಳ ಮಹತ್ತರವಾದ ಪ್ರಶ್ನೆ ಇದೆ. 155 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿಟ್ಟು ಕೇವಲ 61–70 ಕೋಟಿ ಖರ್ಚು ಮಾಡಬೇಕಾದರೆ ಅದಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ:– ಇದಕ್ಕೆ ಕಾರಣಗಳು ಹಲವಾರು ಇವೆ. ತನ್ನ ಇಲಾಖೆಗಳ ಬೇಡಿಕೆಗಳು ಇವತ್ತೇ ಇಲ್ಲಿ ಚರ್ಚೆಗೆ ಬರುತ್ತಾ ಇವೆ. ಇವತ್ತು – ನಾಳೆ ಚರ್ಚೆಯಾಗುತ್ತದೆ. ಆದ್ದರಿಂದ ಮಾನ್ಯ ಶಿರವಾಳ ಅವರು ಹೇಳಬೇಕಾದುದನ್ನೆಲ್ಲ ಅಲ್ಲಿ ಹೇಳಿದರೆ, ಸವಿಸ್ತಾರವಾದ ಉತ್ತರವನ್ನು ನಾನು ಕೊಡಬಲ್ಲೆ.

Special Notification Under Section 61 of Civil Procedure Code.

374 (2026): Prof. M.D. Nanjundaswamy (Dharwad Rural):–